# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1186 (1211) |
| ಸದಸ್ಯರ ಹೆಸರು | : | ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 17.12.2025 |
| ಉತ್ತರಿಸುವ ಸಚಿವರು | : | ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧೀನದಲ್ಲಿ ಬರುವ ವಸತಿ ನಿಲಯ, ವಸತಿ ಶಾಲೆಗಳ ಸಂಖ್ಯೆ ಎಷ್ಟು;</td><td>ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದಲ್ಲಿನ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಬರುವ ವಸತಿ ನಿಲಯ/ ವಸತಿ ಶಾಲೆಗಳ ಸಂಖ್ಯೆ ಈ ಕೆಳಕಂಡಂತಿದೆ.
<table>
<tr><th>ಕ್ರ. ಸಂ</th><th>ಜಿಲ್ಲೆ</th><th>ವಸತಿ ಶಾಲೆಗಳ ಸಂಖ್ಯೆ</th><th>ವಸತಿ ನಿಲಯಗಳ ಸಂಖ್ಯೆ</th></tr>
<tr><td>1</td><td>ಕಲಬುರಗಿ</td><td>15</td><td>51</td></tr>
<tr><td>2</td><td>ಯಾದಗಿರಿ</td><td>4</td><td>12</td></tr>
</table></td></tr>
<tr><td>ಆ)</td><td>ಈ ಮೇಲ್ಕಂಡ ವಸತಿ ನಿಲಯ ಮತ್ತು ವಸತಿ ಶಾಲೆಗಳಲ್ಲಿ ಮೂಲಸೌಕರ್ಯಗಳಿಲ್ಲದೆ. ಮಕ್ಕಳಿಗೆ ನಿಯಮದಂತೆ ಸಮರ್ಪಕ ಊಟ, ಉಪಹಾರ ನೀಡದೆ ಇರುವುದರಿಂದ ಕಲ್ಯಾಣ ಕರ್ನಾಟಕ ಭಾಗದ ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;<br>ಬಂದಿದ್ದಲ್ಲಿ, ಅಪೌಷ್ಟಿಕತೆ ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;</td><td>ಇಲ್ಲ<br>ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ವಸತಿ ಶಾಲೆ ಮತ್ತು ವಸತಿ ನಿಲಯಗಳಿಗೆ ಅನುದಾನ ಲಭ್ಯತೆಗೆ ಅನುಗುಣವಾಗಿ ಅಗತ್ಯ ಮೂಲಭೂತ ಸೌಕರ್ಯಗಳಾದ ಟೂ ಟೈಯರ್ ಕಾಟ್, ಡೈನಿಂಗ್ ಟೇಬಲ್, ಡ್ಯೂಯಲ್ ಡೆಸ್ಕ್, ಹಾಸಿಗೆ ಹೊದಿಕೆ ಹಾಗೂ ವಿದ್ಯಾರ್ಥಿಗಳಿಗೆ ಸಮವಸ್ತ್ರ, ಶೂ, ಸಾಕ್ಸ್, ಪಠ್ಯಪುಸ್ತಕ, ಲೇಖನಾ ಸಾಮಾಗ್ರಿಗಳನ್ನು ಒದಗಿಸಲಾಗುತ್ತಿದೆ.<br><br>ಅಲ್ಪಸಂಖ್ಯಾತರ ವಸತಿ ನಿಲಯ ಮತ್ತು ವಸತಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿರುವ ಕುರಿತು ಯಾವುದೇ ಪ್ರಕರಣ ವರದಿಯಾಗಿರುವುದಿಲ್ಲ. ಹಾಗೂ ಮಕ್ಕಳಿಗೆ ಪೌಷ್ಟಿಕಾಂಶವುಳ್ಳ ಆಹಾರವನ್ನು ಇಲಾಖೆಯಿಂದ ನಿಗದಿಪಡಿಸಿದ ಮೇನುಚಾರ್ಟ್ ಪ್ರಕಾರ ನಿಯಮಾನುಸಾರ ನೀಡಲಾಗುತ್ತಿದೆ.</td></tr>
</table>

**ಇ)** ಸದರಿ ವಸತಿ ನಿಲಯಗಳಿಗೆ ಆಹಾರ ಹಾಗೂ ಇನ್ನಿತರೆ ಅಗತ್ಯ ವಸ್ತುಗಳ ಪೂರೈಕೆ ಮಾಡುವ ಟೆಂಡರ್ ಯಾರಿಗೆ ನೀಡಲಾಗಿದೆ ಹಾಗೂ ಇವರಿಗೆ ನೀಡುವ ಮಾಸಿಕ/ವಾರ್ಷಿಕ ಹಣವೆಷ್ಟು; ಒಬ್ಬ ವಿದ್ಯಾರ್ಥಿಗೆ ಮಾಸಿಕ ತಗಲುವ ವೆಚ್ಚ ಎಷ್ಟು; (ವಿವರ ನೀಡುವುದು)

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ವಸತಿ ವಿದ್ಯಾರ್ಥಿನಿಲಯಗಳಿಗೆ ಆಹಾರ ಹಾಗೂ ಇತರೆ ಅಗತ್ಯ ವಸ್ತುಗಳ ಪೂರೈಕೆ ಮಾಡಲು ಟೆಂಡರ್ ಮೂಲಕ ನೀಡಲಾಗಿರುವ ಸರಬರಾಜುದಾರರ ವಿವರ ಈ ಕೆಳಕಂಡಂತಿದೆ.

| ಕ್ರ. ಸಂ | ಜಿಲ್ಲೆ | ಸರಬರಾಜುದಾರರು | ವಾರ್ಷಿಕವಾಗಿ ಪಾವತಿಸಲಾಗುತ್ತಿರುವ ಮೊತ್ತ (ರೂ.ಗಳಲ್ಲಿ) |
|---|---|---|---|
| 1 | ಕಲಬುರಗಿ | ಆಳಂದ ತಾಲ್ಲೂಕು: Sunilkumar V Sajjan (Sajjana Super Bazar Jewargi | 43,29,000/- |
| | | ಕಲಬುರಗಿ ತಾಲ್ಲೂಕು: Mohamed Masood Ali (Gulbarga Dist Backward Classes And Minorities Ladies Multipurpose Co So) Kalaburagi-585102 | 3,51,67,500/- |
| | | ಜೇವರ್ಗಿ ತಾಲ್ಲೂಕು: Rasheed Ahmed (Backward Classes And Minorities Ladies Multi purpose Co Operative Society) Kalaburagi-585102 | 62,21,800/- |
| | | ಚಿತ್ತಾಪೂರ ತಾಲ್ಲೂಕು: Indumathi (Indira Mahila Mandal) Chittapur | 97,64,200/- |
| | | ಸೇಡಂ ತಾಲ್ಲೂಕು: G S VEENA (KAPIL ENTERPRISES) | 32,84,600/- |
| | | ಅಫಜಲಪುರ ತಾಲ್ಲೂಕು: Sujata (M/S Manoj Enterprises) Gangavati-583227 | 50,35,600/- |
| | | ಚಿಂಚೋಳಿ ತಾಲ್ಲೂಕು: Pupaali Jayanthi Chincholi Taluka Mahila Swsahaya Sangh Mandal Chincholi. | 44,17,800/- |
| 2 | ಯಾದಗಿರಿ | ರಜಿಯಾ ಸುಲ್ತಾನ ಮಹಿಳಾ ಮಂಡಳಿ ಸುರಪುರ | 3,96,85,000/- |

ಮೆಟ್ರಿಕ್ ಪೂರ್ವ ಒಬ್ಬ ವಿದ್ಯಾರ್ಥಿಗೆ ಮಾಸಿಕ ತಗಲುವ ವೆಚ್ಚ- ರೂ.1750/-

ಮೆಟ್ರಿಕ್ ನಂತರ ಒಬ್ಬ ವಿದ್ಯಾರ್ಥಿಗೆ ಮಾಸಿಕ ತಗಲುವ ವೆಚ್ಚ-ರೂ.1850/-

.....3

| | | |
|---|---|---|
| **ಈ)** | ವಸತಿ ನಿಲಯ/ವಸತಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿ ಸುಳ್ಳು ಲೆಕ್ಕ ತೋರಿಸಿ ವಾರ್ಡನ್ ಹಾಗೂ ಗುತ್ತಿಗೆದಾರ ಮತ್ತು ಇಲಾಖೆ ಅಧಿಕಾರಿಗಳು ಹೊಂದಾಣಿಕೆ ಮಾಡಿಕೊಂಡು ಭ್ರಷ್ಟಾಚಾರ ಎಸಗಿರುವುದರ ಬಗ್ಗೆ ಲೋಕಾಯುಕ್ತ ದಾಳಿ ವೇಳೆ ಪತ್ತೆಯಾಗಿದ್ದು, ಇದಕ್ಕೆ ಹೊಣೆಗಾರರು ಯಾರು ಇವರ ವಿರುದ್ಧ ಕೈಗೊಂಡ ಕ್ರಮಗಳೇನು; ಹಾಗೂ ಕಲಬುರಗಿ ಲೋಕಾಯುಕ್ತರು ನೀಡಿರುವ ವರದಿಯ ಅಂಶಗಳೇನು? (ವರದಿ ನೀಡುವುದು) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ವ್ಯಾಪ್ತಿಯಲ್ಲಿರುವ ವಸತಿ ನಿಲಯ/ವಸತಿ ಶಾಲೆಗಳಿಗೆ ಲೋಕಾಯುಕ್ತ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿರುತ್ತಾರೆ. ಈ ಕುರಿತು ಇಲಾಖೆಗೆ ಯಾವುದೇ ವರದಿ ಸ್ವೀಕೃತವಾಗಿರುವುದಿಲ್ಲ. |

**ಸಂಖ್ಯೆ: MWD-LMQ/232/2025**

(ಬಿ.ಜೆಡ್. ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು